# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 980 |
| ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 27-12-2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

****

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರವು 2009-10ನೇ ಸಾಲಿನಲ್ಲಿ ಜೀಗೇನಹಳ್ಳಿ (ಆರ್.ಜಿ. ಲೇಔಟ್) ಬಡಾವಣೆಯಲ್ಲಿ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುವ ನಿವೇಶನಗಳಲ್ಲಿ ತಡವಾಗಿ ಹಣ ಪಾವತಿಸಿರುವ 269 ಜನರಿಗೆ ಕ್ರಯ ಪತ್ರವನ್ನು ನೀಡಿರುವುದಾಗಿ ತಿಳಿಸಲಾಗಿದ್ದು, ಉಳಿಕೆ 23 ಬಡ ಜನರಿಗೆ ಸ್ವಾಧೀನ ಪತ್ರ ಮತ್ತು ಕ್ರಯ ಪತ್ರ ನೀಡುವ ಬಗ್ಗೆ ಈವರೆಗೆ ಕೈಗೊಂಡಿರುವ ಕ್ರಮಗಳೇನು; | ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರವು 2009-2010ನೇ ಸಾಲಿನಲ್ಲಿ ಜೀಗೇನಹಳ್ಳಿ (ಆರ್‌ಜಿ ಲೇಔಟ್) ಬಡಾವಣೆಯಲ್ಲಿ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಅಂದಿನ ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸದರಿ ಬಡಾವಣೆಯಲ್ಲಿ 269 ನಿವೇಶನದಾರರಿಗೆ ತಡವಾಗಿ ಹಣ ಪಾವತಿಸಿಕೊಂಡು ಕ್ರಯಪತ್ರವನ್ನು ನೀಡಲಾಗಿರುತ್ತದೆ.<br><br>ಪ್ರಾಧಿಕಾರದ ವತಿಯಿಂದ ಹಂಚಿಕೆಯಾಗಿರುವ ನಿವೇಶನಗಳ ಮೊತ್ತವನ್ನು ನಿಗಧಿತ ಅವಧಿ ಮೀರಿದ ನಂತರ ಪಾವತಿಸಿಕೊಳ್ಳಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ಉಳಿಕೆ 22 ನಿವೇಶನ ಹಂಚಿಕೆದಾರರಿಗೆ ನಿವೇಶನ ಸಂಬಂಧ ಪಾವತಿಸಿರುವ ಮೊತ್ತವನ್ನು ಹಿಂಪಡೆಯುವಂತೆ ಸೂಚಿಸಲಾಗಿರುತ್ತದೆ. |
| ಆ | 23 ಬಡ ಜನರಿಗೆ ಕ್ರಯ ಪತ್ರ ನೀಡುವ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರವು ವಿಳಂಭ ಧೋರಣೆಯನ್ನು ಅನುಸರಿಸಲು ಕಾರಣವೇನು? | ಸದರಿ ನಿವೇಶನ ಹಂಚಿಕೆದಾರರು ಒಟ್ಟು ನಿವೇಶನದ ಮೌಲ್ಯದಲ್ಲಿ ಪ್ರಾರಂಭಿಕ ಠೇವಣಿಯನ್ನು ಮುರಿದುಕೊಂಡು ನಿವೇಶನ ಸಂಬಂಧ ಬಾಕಿ ಮೊತ್ತವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1991 ರ ನಿಯಮ 19(1) ರ ಅನ್ವಯ ನಿಯಮಾನುಸಾರ ನಿಗಧಿತ ಅವಧಿಯೊಳಗೆ ಪಾವತಿಸುವಲ್ಲಿ ವಿಫಲರಾಗಿರುತ್ತಾರೆ. ಸದರಿ ನಿವೇಶನ ಹಂಚಿಕೆದಾರರಿಗೆ ನಿವೇಶನ ಸಂಬಂಧ ಪಾವತಿಸಿರುವ ಮೊತ್ತವನ್ನು ಹಿಂಪಡೆಯುವಂತೆ ಸೂಚಿಸಲಾಗಿರುತ್ತದೆ. ಆದರೆ ಸದರಿ ನಿವೇಶನ ಹಂಚಿಕೆದಾರರು ಪ್ರಾಧಿಕಾರದ ಕ್ರಮಬದ್ಧತೆಯನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 53131-53150/2015 ಹಾಗೂ ರಿಟ್ ಪಿಟಿಷನ್ ಸಂಖ್ಯೆ 52805/2017ರ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಪ್ರಕರಣಗಳಲ್ಲಿ ವಿಚಾರಣೆಯನ್ನು ನಡೆಸಿ remedy before the Revisional Authority under Section 63 of the Karnataka Urban Development and Authorities Act, 1987 ರಂತೆ ರಿವಿಷನ್ ಪಿಟಿಷನ್ (ಪರಿಷ್ಕರಣಾ ಅರ್ಜಿ)ಯನ್ನು ಸಲ್ಲಿಸಿಕೊಳ್ಳುವಂತೆ ಆದೇಶಿಸಲಾಗಿರುತ್ತದೆ. |

| | | |
|---|---|---|
| | | ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದಂತೆ ಜೀಗೇನಹಳ್ಳಿ ಬಡಾವಣೆಯ 13 ನಿವೇಶನ ಹಂಚಿಕೆದಾರರು ಹಾಗೂ ಸುಣ್ಣಘಟ್ಟ/ಕಣ್ವ ವಸತಿ ಬಡಾವಣೆಯ 12 ನಿವೇಶನ ಹಂಚಿಕೆದಾರರು ಸೇರಿ ಒಟ್ಟು 25 ನಿವೇಶನ ಹಂಚಿಕೆದಾರರ ಪೈಕಿ 22 ನಿವೇಶನದಾರರು ಪರಿಷ್ಕರಣಾ ಪ್ರಾಧಿಕಾರವಾದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರ ಸಮ್ಮುಖದಲ್ಲಿ ರಿವಿಷನ್ ಪಿಟಿಷನ್ (ಪರಿಷ್ಕರಣಾ ಅರ್ಜಿ)ಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣಾ ಪ್ರಾಧಿಕಾರವು ಸದರಿ ಪ್ರಕರಣಗಳಲ್ಲಿ ವಿಚಾರಣೆಯನ್ನು ನಡೆಸಿ ದಿನಾಂಕ 10-11-2022 ರಂದು ರಿವಿಷನ್ ಪಿಟಿಷನ್ (ಪರಿಷ್ಕರಣಾ ಅರ್ಜಿ)ಯನ್ನು ವಜಾಗೊಳಿಸಿರುತ್ತದೆ. |

ಸಂಖ್ಯೆ: ನಅಇ 323 ಬಿಎಂಆರ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ